# ಶ್ರೀಮಾತೆಯವರ ಚರಣತಲದಲ್ಲಿ

ಬಂಗಾಳಿ ಮೂಲ: **ಪ್ರವ್ರಾಜಿಕಾ ಭಾರತೀಪ್ರಾಣಾ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಶ್ರೀ ಶ್ರೀ ಮಾಯೇರ್ ಕಥಾ**' (ಕನ್ನಡದಲ್ಲಿ– 'ಶ್ರೀಶಾರದಾದೇವಿ ವಚನವೇದ') ಗ್ರಂಥದ ಎರಡನೇ ಭಾಗದಲ್ಲಿ ಹಾಗೂ ಸ್ವಾಮಿ ಚೇತನಾನಂದರು ಸಂಪಾದಿಸಿದ '**ಮಾತೃದರ್ಶನ**' ಗ್ರಂಥದಲ್ಲಿ ಶ್ರೀಮಾತೆಯವರನ್ನು ಕುರಿತಂತೆ ಪ್ರವ್ರಾಜಿಕಾ ಭಾರತೀಪ್ರಾಣಾ ಅವರ ಎರಡು ಸ್ಮೃತಿಲೇಖನಗಳು ಸೇರ್ಪಡೆಗೊಂಡಿವೆ. ಈ ಎರಡೂ ಸ್ಮೃತಿಲೇಖನಗಳನ್ನು ಕ್ರಮವಾಗಿ 'ಶ್ರೀಮತಿ ಸರಳಾಬಾಲಾ ದೇವಿ' ಹಾಗೂ 'ಶ್ರೀ ಭಾರತೀ' (ಸರಳಾ ದೇವಿ) ವಿರಚಿತವೆಂದು ಉಲ್ಲೇಖಿಸಲಾಗಿದೆ. ಪ್ರವ್ರಾಜಿಕಾ ಭಾರತೀಪ್ರಾಣಾ ಅವರ ಪೂರ್ವಾಶ್ರಮದ ಹೆಸರು ಪಾರುಲ್ ಎಂದಾಗಿತ್ತು. ಸೋದರಿ ನಿವೇದಿತಾ ಅವರ ಒಡನಾಡಿಯಾಗಿದ್ದ ಸುಧೀರಾ ಬಸು ಅವರ ಹೆಸರನ್ನು 'ಸರಳಾ' ಎಂದು ಬದಲಾಯಿಸಿದರು. ಸ್ವಾಮಿ ಶಾರದಾನಂದರು ಅವರಿಗೆ ಕಾವಿಬಟ್ಟೆಯನ್ನು ನೀಡಿ, ಅವರಿಗೆ 'ಶ್ರೀಭಾರತೀ' ಎಂಬ ಹೆಸರನ್ನು ನೀಡಿದರು.

ಮುಂದೆ ಸರಳಾದೇವಿ ಶ್ರೀಶಾರದಾ ಮಠದ ಪ್ರಥಮ ಅಧ್ಯಕ್ಷೆಯಾದರು. ಆಗ ಬೇಲೂರು ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಶಂಕರಾನಂದರು ಅವರಿಂದ ವಿಧಿಪೂರ್ವಕವಾಗಿ ವಿರಜಾ ಹೋಮ ಮಾಡಿಸಿ, ಸಂನ್ಯಾಸದೀಕ್ಷೆಯನ್ನು ನೀಡಿದರು. ಸಂನ್ಯಾಸದ ನಂತರ ಅವರ ಹೆಸರು 'ಪ್ರವ್ರಾಜಿಕಾ ಭಾರತೀಪ್ರಾಣಾ' ಎಂದಾಯಿತು. ಮೇಲೆ ಹೇಳಿದ ಎರಡು ಸ್ಮೃತಿಲೇಖನಗಳಲ್ಲದೆ, ಶ್ರೀ ಶಾರದಾ ಮಠವು ಪ್ರಕಟಿಸಿದ, ಪ್ರವ್ರಾಜಿಕಾ ನಿರ್ಭಯಪ್ರಾಣಾ ಅವರಿಂದ ಸಂಪಾದಿಸಲ್ಪಟ್ಟ '**ಭಾರತೀಪ್ರಾಣಾ ಸ್ಮೃತಿಕಥಾ**' ಎಂಬ ಗ್ರಂಥದಲ್ಲಿ (೧೯೮೮) ಅವರ ಒಂದು 'ಆತ್ಮಸ್ಮೃತಿ'ಯನ್ನು ಸೇರಿಸಲಾಗಿದೆ. ಅಲ್ಲಿ ಶ್ರೀಮಾತೆಯವರನ್ನು ಕುರಿತು ಅವರು ಹೇಳಿರುವ ಕೆಲವು ವಿಷಯಗಳು ಮೇಲೆ ಹೇಳಿದ ಎರಡೂ ಲೇಖನಗಳಲ್ಲಿ ಸೇರ್ಪಡೆಯಾಗಿಲ್ಲ. ಇಲ್ಲಿ ಆ ಹೆಚ್ಚಿನ ಅಂಶಗಳನ್ನು ಪ್ರತ್ಯೇಕಿಸಿ, ಈ ಸಂಕಲನ ಮಾಡಲಾಗಿದೆ. *(–ಸಂ)*

## ಭಾಗ ೧

೧೯೦೨ ನೇ ಇಸವಿಯಲ್ಲಿ ನಾನು ನಿವೇದಿತಾ ಶಾಲೆಯಲ್ಲಿ ಸೇರಿಕೊಂಡೆ. ಆಗ ಶಾಲೆಯು ೧೭, ಬೋಸ್‌ಪಾರಾ ಲೇನ್‌ನಲ್ಲಿತ್ತು. ನಿವೇದಿತಾ ಶಾಲೆಗೆ ಆಗಾಗ ಸ್ವಾಮೀಜಿ ಬರುತ್ತಿದ್ದರು. ಆದರೆ ಆಗ ನಾವೆಲ್ಲ ತುಂಬ ಚಿಕ್ಕವರು[೧]; ಆದ್ದರಿಂದ ಹೆಚ್ಚೇನೂ ನೆನಪಿಲ್ಲ. ಬಹಳ ಎತ್ತರವಾದ, ಹಾಗೂ ಅಗಲವಾದ ಶರೀರ; ದೊಡ್ಡ ಕಣ್ಣುಗಳು — ಇವು ಚೆನ್ನಾಗಿ ನೆನಪಿವೆ. ಬಹುಶಃ ಅದೇ ವರ್ಷ, ಶ್ರೀರಾಮಕೃಷ್ಣರ ಜಯಂತಿಯ ದಿನದಂದು ಸೋದರಿ ನಿವೇದಿತಾ ನಾವು ಹನ್ನೆರಡು ಮಂದಿ ಚಿಕ್ಕ ಚಿಕ್ಕ ಹೆಣ್ಣು ಮಕ್ಕಳನ್ನು ದೋಣಿಯಲ್ಲಿ ಬೇಲೂರು ಮಠಕ್ಕೆ ಕರೆದುಕೊಂಡು ಹೋಗಿದ್ದರು. ನಾವೆಲ್ಲರೂ ಸ್ವಾಮೀಜಿಯವರಿಗೆ ಪ್ರಣಾಮ ಮಾಡಿದೆವು — ಇದೆಲ್ಲವೂ ಅಸ್ಪಷ್ಟವಾಗಿ ನನಗೆ ನೆನಪಿದೆ.

ಆಗ ಸಾಯಂಕಾಲವಾದ ಮೇಲೆ ಶರತ್ ಮಹಾರಾಜ್ ಶಾಲೆಗೆ ಬಂದು ಹೆಣ್ಣುಮಕ್ಕಳಿಗೆ ಗೀತಾ ತರಗತಿ ಮಾಡುತ್ತಿದ್ದರು. ಆಗ ಶರತ್ ಮಹಾರಾಜರಿಗೆ ಉದ್ದನೆಯ ಗಡ್ಡವಿತ್ತು. ಗೃಹಿಣಿಯರ ಅಂಗಣದ ತಡಿಕೆಯ ಹಿಂದೆ ಕುಳಿತುಕೊಳ್ಳಲು ಸ್ಥಳವಿತ್ತು. ನಾವು ಚಿಕ್ಕವರು ಜಗಲಿಯಲ್ಲೇ ಕುಳಿತುಕೊಳ್ಳುತ್ತಿದ್ದೆವು. ಸೋದರಿ ನಿವೇದಿತಾ ನಮ್ಮ ಸಮೀಪದಲ್ಲೇ ಕುಳಿತುಕೊಳ್ಳುತ್ತಿದ್ದರು. ನಮ್ಮೆಲ್ಲರನ್ನೂ ಸೋದರಿ ಕುದುರೆ ಗಾಡಿಯಲ್ಲಿ ಕರೆದುಕೊಂಡು ಬರುತ್ತಿದ್ದರು. ಮೆಟ್ಟಿಲ ಸಮೀಪದಲ್ಲಿ ಒಂದು ಸ್ಥಳದಲ್ಲಿ ಕುಳಿತು ಶರತ್ ಮಹಾರಾಜ್ ತರಗತಿ ನಡೆಸುತ್ತಿದ್ದರು. ನಾವು ನಿದ್ದೆ ಮಾಡಿ



ಬಿಡುತ್ತಿದ್ದೆವು. ಸೋದರಿ ನಮ್ಮನ್ನು ಮಡಿಲಲ್ಲಿ ಮಲಗಿಸಿಕೊಂಡೇ ನಮ್ಮನ್ನು ಮನೆಗೆ ಬಿಟ್ಟುಬರುತ್ತಿದ್ದರು.

ಸಾಮಾನ್ಯವಾಗಿ ಯೋಗಿನ್–ಮಾ ಹಾಗೂ ಗೋಲಾಪ್–ಮಾ ಅವರನ್ನೂ ನಾನು ಶಾಲೆಯಲ್ಲಿ ನೋಡುತ್ತಿದ್ದೆ. ಅವರು ಹೆಚ್ಚಾಗಿ

---

೧ ಪ್ರವ್ರಾಜಿಕಾ ಭಾರತೀಪ್ರಾಣಾ ಅವರು ಹುಟ್ಟಿದ್ದು ೧೮೯೪ರ ಜುಲೈ ತಿಂಗಳಲ್ಲಿ.



ಪ್ರತಿದಿನವೂ ಬಲರಾಮ ಮಂದಿರಕ್ಕೆ ಬರುತ್ತಿದ್ದರು. ಮರಳಿ ಹೋಗುವಾಗ ಸೋದರಿ ನಿವೇದಿತಾ ಅವರನ್ನು ಕಂಡೇ ಹೋಗುತ್ತಿದ್ದರು. ಅವರಿಗೆ ಸೋದರಿ ನಿವೇದಿತಾ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದರು. ಅವರೂ ಕೂಡ ಆಕೆಯ ಗಲ್ಲವನ್ನು ಸ್ಪರ್ಶಿಸಿ ಆದರಿಸುತ್ತ, ''ನಿವೇದಿತಾ, ಹೇಗಿದ್ದೀಯಾ ನೀನು?'' ಎಂದು ವಿಚಾರಿಸುತ್ತಿದ್ದರು.

ಒಂದು ದಿನ ಸೋದರಿ ನಿವೇದಿತಾ ನಮ್ಮಲ್ಲಿ ಕೆಲವರನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋಗಿದ್ದರು. ನಾನು ಶ್ರೀಮಾತೆಯವರನ್ನು ನೋಡಿದುದು ಅದೇ ಮೊದಲು. ಆಗ ಶ್ರೀಮಾತೆಯವರು ಬಾಗ್‌ಬಜಾರಿನ ಬೀದಿಯಲ್ಲಿದ್ದ ಬಾಡಿಗೆ ಮನೆಯಲ್ಲಿದ್ದರು. ನಾವೆಲ್ಲರೂ ಅವರಿಗೆ ಪ್ರಣಾಮ ಮಾಡಿ ಹೊರಗೆ ನಿಂತಿದ್ದೆವು. ಆಗ ಸೋದರಿ ನಿವೇದಿತಾ ಶ್ರೀಮಾತೆಯವರ ಬಳಿ ಕುಳಿತು ಮಾತನಾಡತೊಡಗಿದರು. ಅನಂತರ ಪ್ರಸಾದ ಸ್ವೀಕರಿಸಿ ಮರಳಿ ಬಂದೆವು.

೧೯೦೯ನೇ ಇಸವಿಯಲ್ಲಿ ಶ್ರೀಮಾತೆಯವರು 'ಉದ್ಬೋಧನ' ಮನೆಗೆ ಬಂದರು. ಆಗ ಸೋದರಿ ನಿವೇದಿತಾ ಒಂದು ದಿನ ಶ್ರೀಮಾತೆಯವರನ್ನು ಶಾಲೆಗೆ ಕರೆದುಕೊಂಡು ಬಂದರು. ಅಂದು ಸೋದರಿ ಎಷ್ಟೊಂದು ಆನಂದಗೊಂಡಿದ್ದರು ಎಂದು ಹೇಳಲಾಗದು! ಚಿಕ್ಕ ಬಾಲಕಿಯಂತೆ ಅಲ್ಲಿಲ್ಲಿ ಓಡಾಡುತ್ತ ಶಾಲೆಯ ಕಟ್ಟಡವನ್ನೆಲ್ಲ ಸಿಂಗರಿಸುತ್ತಿದ್ದರು.

ನಡುನಡುವೆ ಅವರು ನಮ್ಮನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋಗುತ್ತಿದ್ದರು. ಆಗ ನಮಗೆ ಯಾವುದೂ ಅರ್ಥವಾಗುತ್ತಿರಲಿಲ್ಲ. ಆದರೂ, ಸೋದರಿಯೊಂದಿಗೆ ಸುತ್ತಾಡುವುದು, ಶ್ರೀಮಾತೆಯವರ ಬಳಿಗೆ ಹೋಗುವುದು ಇವೆಲ್ಲ ನಮಗೆ ಸಂತಸವನ್ನುಂಟುಮಾಡುತ್ತಿದ್ದವು.

ಶಾಲೆಯೆಂದರೆ ನನಗೆ ಅದೇನೋ ವಿಶೇಷ ಸೆಳೆತ. ಶಾಲೆ ಬಿಟ್ಟು ಮನೆಗೆ ಹೋಗಲು ಇಷ್ಟವಾಗುತ್ತಿರಲಿಲ್ಲ. ಬೆಳೆಯುತ್ತಿದ್ದಂತೆ ನನ್ನಲ್ಲಿ ಈ ಸೆಳೆತ ಹೆಚ್ಚುತ್ತ ಹೋಯಿತು. ಸುಧೀರಾ ಅಕ್ಕ ಅಲ್ಲಿಗೆ ಬಂದಾಗ ನಾವು ತುಸು ಮೇಲಿನ ತರಗತಿಯಲ್ಲಿದ್ದೆವು. ಅವರು ನಮ್ಮನ್ನು ತುಂಬಾ ಪ್ರೀತಿಸುತ್ತಿದ್ದರು. ನಮಗೂ ಅವರೆಂದರೆ ತುಂಬಾ ಪ್ರೀತಿ. ನಮ್ಮೆಲ್ಲರಲ್ಲಿ ಧಾರ್ಮಿಕ ಭಾವನೆಯನ್ನು ಬೆಳೆಸಲು ಸುಧೀರಾ ಅಕ್ಕ ಬಹಳಷ್ಟು ಪ್ರಯತ್ನ ಮಾಡುತ್ತಿದ್ದರು.

ಮನೆಯಲ್ಲಿ ನನಗಿಟ್ಟಿದ್ದ ಹೆಸರು 'ಪಾರುಲ್' ಎಂದು. ಸುಧೀರಾ ಅಕ್ಕ ನನ್ನ ಹೆಸರನ್ನು ಬದಲಾಯಿಸಿ, 'ಸರಳಾ' ಎಂದು ಇಟ್ಟರು. ಅವಳು ನಡುನಡುವೆ ನನ್ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋಗುತ್ತಿದ್ದರು.

ಅದೇ ವರ್ಷ ದುರ್ಗಾಪೂಜೆಯ ರಜೆಯಲ್ಲಿ , ಅಂದರೆ ೧೯೧೧ರ ಅಕ್ಟೋಬರ್ ೧೩ರಂದು ಸೋದರಿ ನಿವೇದಿತಾ ತೀರಿಕೊಂಡರು. ಸುಧೀರಾ ಅಕ್ಕನಿಗೆ ಆಘಾತವುಂಟಾಯಿತು. ಅವರು ಕಾಯಿಲೆ ಬಿದ್ದರು.

ಆಗ ಸ್ವಾಮಿ ಪ್ರೇಮಾನಂದರು 'ಉದ್ಬೋಧನ'ದಲ್ಲಿದ್ದರು. ಒಂದು ದಿನ ಅವರು ನನಗೆ ಹೇಳಿದರು: ''ಒಂದು ದಿನ ಶ್ರೀಮಾತೆಯವರನ್ನು ಕಂಡು ಬಾ.'' ಅವರೇ ಅದಕ್ಕೆ ಬೇಕಾದ ವ್ಯವಸ್ಥೆಯನ್ನೆಲ್ಲ ಮಾಡಿದರು. ಡಾಕ್ಟರ್ ದುರ್ಗಾಪದ ಬಾಬುಗಳ ಪತ್ನಿ ಶ್ರೀಮಾತೆಯವರ ದರ್ಶನ ಪಡೆಯಲು ಹೋಗುತ್ತಾರೆ; ಅವರಿಗೆ ಹೇಳಿದರು, ಹೋಗುವಾಗ ಅವರ ಗಾಡಿಯಲ್ಲಿ ನನ್ನನ್ನೂ ಕರೆದುಕೊಂಡು ಹೋಗಬೇಕು ಎಂಬುದಾಗಿ. ನಾನು ಅವರೊಂದಿಗೆ 'ಉದ್ಬೋಧನ'ಕ್ಕೆ ಹೋದೆ. ಆದರೆ ಅಂದು ಶ್ರೀಮಾತೆಯವರನ್ನು ಬಲರಾಮ ಮಂದಿರಕ್ಕೆ ಆಹ್ವಾನಿಸಿದ್ದರು. ಅವರು ಮರಳಿ ಬಂದ ಕೂಡಲೇ ನಾವು ಮರಳಿ ಬರಬೇಕಾಯಿತು; ಹೀಗಾಗಿ ಮಾತುಕತೆಯೇನೂ ನಡೆಯಲಿಲ್ಲ. ಶ್ರೀಮಾತೆಯವರೂ ವಿಷಾದ ವ್ಯಕ್ತಪಡಿಸುತ್ತ ಹೇಳಿದರು: ''ಏನಮ್ಮಾ, ನೀನು ಬಂದೆ; ನಿನ್ನೊಂದಿಗೆ ಕುಳಿತುಕೊಂಡು ನಾಲ್ಕು ಮಾತುಗಳನ್ನಾಡಲೂ ಸಾಧ್ಯವಾಗಲಿಲ್ಲ.'' ತುಂಬ ಪ್ರೀತಿಯಿಂದ ಅವರು ಆಶೀರ್ವಾದ ಮಾಡಿದರು.

ಆ ಬಾರಿ ಬೇಲೂರು ಮಠದಲ್ಲಿ ನಡೆದ ದುರ್ಗಾಪೂಜೆಗೆ ಬಾಬುರಾಮ್ ಮಹಾರಾಜರು (ಸ್ವಾಮಿ ಪ್ರೇಮಾನಂದರು) ಶ್ರೀಮಾತೆಯವರನ್ನು ಕರೆದುಕೊಂಡು ಹೋಗಿದ್ದರು. ಸುಧೀರಾ ಅಕ್ಕ ದುರ್ಗಾಪೂಜೆಯ ನಂತರ ಪುರಿಗೆ ಹೋಗಲು ನಿಶ್ಚಯಿಸಿಕೊಂಡರು. ದುರ್ಗಾಪೂಜೆಯ ಸಂದರ್ಭದಲ್ಲಿ ಕೆಲವು ದಿನ ಅವರು ಶ್ರೀಮಾತೆಯವರೊಂದಿಗೆ ಬೇಲೂರು ಮಠದಲ್ಲಿದ್ದರು. ಏಕಾದಶಿಯಂದು ಮರಳಿ ಬಂದು, ತ್ರಯೋದಶಿಯಂದು ಪುರಿಗೆ ಹೊರಟರು.

ಸ್ವಾಮಿ ಪ್ರಜ್ಞಾನಂದರು ಒಂದು ದಿನ ಬಂದು ಹೇಳಿದರು: ''ಮಹಾಷ್ಟಮಿಯಂದು ಬೇಲೂರು ಮಠಕ್ಕೆ ಹೋಗಿ, ಶ್ರೀಮಾತೆಯವರಿಗೆ ಒಂದು ಸಲ ಪ್ರಣಾಮ ಮಾಡಿ ಬಾ.'' ನನಗೆ ಅಷ್ಟು ಭಾಗ್ಯವಿರಲಿಲ್ಲ. ಕೆಲಸದವಳೊಂದಿಗೆ ಹೋಗಿ ಬರುತ್ತೇನೆ ಎಂದು ನಾನು ಮನಸ್ಸಿನಲ್ಲೇ ನಿರ್ಧರಿಸಿಕೊಂಡಿದ್ದೆ; ಆದರೆ ಅವಳಿಗೆ ಅಂದು ಸಿಕ್ಕಾಪಟ್ಟೆ ಉಬ್ಬಸವುಂಟಾಗಿತ್ತು. ಹೋಗಲಾಗಲಿಲ್ಲ ಎಂದು ನಾನು ಕಣ್ಣೀರಿಳಿಸುತ್ತ ಅಳತೊಡಗಿದೆ — ಆ ದಿನವಿಡೀ ಅಳುತ್ತಲೇ ಇದ್ದೆ. ಮನಸ್ಸು ಭಾರವಾಗಿತ್ತು. ಆದರೆ ರಾತ್ರಿ ನಾನು ಸುಂದರವಾದ ಕನಸನ್ನು ಕಂಡೆ. ಬೇಲೂರು ಮಠಕ್ಕೆ ಹೋಗಿ, ಶ್ರೀಮಾತೆಯವರಿಗೆ ಪ್ರಣಾಮ ಮಾಡಿದಂತೆ ಕನಸು ಬಿತ್ತು.

ದುರ್ಗಾಪೂಜೆಯ ನಂತರ ಅನಿರೀಕ್ಷಿತವಾಗಿ ಸಂತಸಪಡುವ ಸುಯೋಗ ನನಗೊದಗಿ ಬಂತು. ಶ್ರೀಮಾತೆಯವರು ಕಾಶಿಗೆ ಹೋಗಿದ್ದರು. ಸುಧೀರಾ ಅಕ್ಕ ಆಗಲೂ ರಜೆಯಲ್ಲಿದ್ದರು. ಅವರು ನನ್ನನ್ನು ಕಾಶಿಗೆ ಕರೆದುಕೊಂಡು ಹೋದರು. ನರೇಶ ಅಕ್ಕ, ಪ್ರಫುಲ್ಲ ಅತ್ತೆ ಹಾಗೂ ರಾಣಿ — ಇವರು ನನ್ನೊಂದಿಗಿದ್ದರು. ಶ್ರೀಮಾತೆಯವರು ಲಕ್ಷ್ಮೀ ದತ್ತರವರ ನಿವಾಸದಲ್ಲಿ ತಂಗಿದ್ದರು. ನಾವು ರಾಮಾಪುರಕ್ಕೆ ಸಮೀಪ ಒಂದು ಮನೆಯಲ್ಲಿದ್ದೆವು. ಬೆಳಿಗ್ಗೆ, ಸಂಜೆ ನಾವು ಶ್ರೀಮಾತೆಯವರ ಬಳಿಗೆ ಹೋಗುತ್ತಿದ್ದೆವು. ಕಾಳೀಪೂಜೆಯ ಸಂದರ್ಭದಲ್ಲಿ ಶ್ರೀಮಾತೆಯವರು ಕಾಶಿಯಲ್ಲಿದ್ದರು. ನಾವು ಜಗದ್ಧಾತ್ರೀ ಪೂಜೆಯ ನಂತರ ಅಲ್ಲಿಗೆ ಹೋಗಿದ್ದೆವು. ಉಳಿದವರೆಲ್ಲ ಹಲವು ಕಡೆ ತಿರುಗಾಡಿ ಬರುತ್ತಿದ್ದರು. ನಾನು ಹೆಚ್ಚಿನ ವೇಳೆಯನ್ನು ಶ್ರೀಮಾತೆಯವರ ಬಳಿ ಕಳೆಯುತ್ತಿದ್ದೆ. ಇದರ ನಡುವೆಯೇ ಶ್ರೀಮಾತೆಯವರ ಜನ್ಮದಿನವೂ ಬಂದಿತ್ತು. ಪೌಷ ಮಾಸದ ಕೊನೆಯ ಭಾಗದಲ್ಲಿ ನಾವು ಕಲ್ಕತ್ತೆಗೆ ಮರಳಿದೆವು.

* * * *

ಶ್ರೀಮಾತೆಯವರು ಜಯರಾಮಬಾಟಿಯಿಂದ 'ಉದ್ಬೋಧನ'ಕ್ಕೆ ಕೊನೆಯ ಬಾರಿ ಬಂದ ನಂತರ, ಅವರ ಸೇವೆಗಾಗಿ ಎರಡು-ನಾಲ್ಕು ದಿನಗಳಾದ ಮೇಲೆ ಶರತ್ ಮಹಾರಾಜರು ನನ್ನನ್ನು ಕರೆಸಿಕೊಂಡರು. ಮಾಘಮಾಸದ ನಡುವೆ ಶ್ರೀಮಾತೆಯವರ ಸೇವೆಗಾಗಿ ನಾನು 'ಉದ್ಬೋಧನ'ಕ್ಕೆ ಹೋದೆ. ಮುಂದಿನ ಶ್ರಾವಣಮಾಸದಲ್ಲಿ ಶ್ರೀಮಾತೆಯವರು ದೇಹತ್ಯಾಗ ಮಾಡಿದರು. ದಿನೇ ದಿನೇ ಶ್ರೀಮಾತೆಯವರ ದೇಹ ಕ್ಷೀಣಿಸುತ್ತ ಹೋಗುತ್ತಿತ್ತು. ಅದನ್ನು ಕಂಡು ನನಗೆ ತುಂಬ ದುಃಖವಾಗುತ್ತಿತ್ತು; ಅಳು ಬರುತ್ತಿತ್ತು. ಒಂದು ದಿನ ಜೋರಾಗಿ ಅಳುತ್ತಾ ಶ್ರೀಮಾತೆಯವರಿಗೆ ಹೇಳಿದೆ, ''ನೀವು ಹೊರಟುಹೋಗಿಬಿಟ್ಟರೆ, ಏನು ಮಾಡಿದರೂ ನಾನು ಉಳಿಯಲಾರೆ.'' ಅದಕ್ಕೆ ಶ್ರೀಮಾತೆ, ''ಹೋಗುತ್ತೀಯೆ, ನಿಜ. ಆದರೆ ನನ್ನ ಬಳಿಗೇ ಹೋಗುತ್ತೀಯೆ. ಆದರೆ ನನ್ನ ಒಂದಿಷ್ಟು ಕೆಲಸಗಳನ್ನು ಮಾಡಿದ ನಂತರ ಹೋಗು'' ಎಂದರು.

ಆಗ ಶ್ರೀಮಾತೆಯವರೊಂದಿಗೆ ರಾಧು, ಅವಳ ಮಗು, ನಳಿನಿ, ಸಣ್ಣತ್ತೆ — ಇವರೆಲ್ಲ ಬಂದಿದ್ದರು. ನ್ಯಾಡ [೨] ತೀರಿಕೊಂಡಿದ್ದ. ಅವನ ನೆನಪಾಗಬಹುದೆಂದೂ, ಅದರಿಂದ ಶ್ರೀಮಾತೆ ಬಹಳ ದುಃಖಿಸಬಹುದೆಂದು ಮಾಕು ಹಾಗೂ ನಳಿನಿ ಇವರಿಬ್ಬರೂ 'ಉದ್ಬೋಧನ'ದಲ್ಲಿ ಇರಲು ಇಷ್ಟಪಡುತ್ತಿರಲಿಲ್ಲ. ಅವರಿಗೆ ಬಲರಾಮ ಬಾಬುವಿನ ಮನೆಯಲ್ಲಿ ತಂಗಲು ವ್ಯವಸ್ಥೆಯಾಗಿತ್ತು.

ಆಗ ಶ್ರೀಮಾತೆಯವರಿಗೆ ಪ್ರತಿದಿನವೂ ಜ್ವರ ಬರುತ್ತಿತ್ತು. ಅನಂತರ ಅದು ಕಾಲಾ ಇಜಾರ ಜ್ವರವಾಗಿ ಬದಲಾಗಿಬಿಟ್ಟಿತು. ನಾನು ಅವರಿಗೆ ಊಟ ಮಾಡಿಸುವುದು, ಅವರು ಮಲಗುವ ಮಂಚ ಇತ್ಯಾದಿಗಳನ್ನು ಸಿದ್ಧಪಡಿಸಿಕೊಡುವುದು, ಸರಿಯಾದ ಸಮಯಕ್ಕೆ ಔಷಧಿ ನೀಡುವುದು ಇತ್ಯಾದಿ ಸೇವೆಗಳನ್ನು ಮಾಡುತ್ತಿದ್ದೆ. ನವಾಸನದ ಸೊಸೆ ಕೂಡ ಸಹಾಯ ಮಾಡುತ್ತಿದ್ದಳು.

ಶರತ್ ಮಹಾರಾಜರು ದೊಡ್ಡ ಡಾಕ್ಟರುಗಳನ್ನೆಲ್ಲ ಕರೆಸಿ ತೋರಿಸಿದರು. ಎಷ್ಟೋ ಬಗೆಯ ಚಿಕಿತ್ಸೆ , ಅನೇಕ ರೀತಿಯ ಶಾಂತಿ-ಸ್ವಸ್ತ್ಯಯನಾದಿಗಳನ್ನೆಲ್ಲ ಮಾಡಿಸಿದ್ದಾಯಿತು. ಸ್ಮಶಾನ-ಸ್ವಸ್ತ್ಯಯನ, ಜಪಯಜ್ಞ ಇವನ್ನೆಲ್ಲ ಮಾಡಿಸಿದ್ದರು. ಆದರೆ ಶ್ರೀಮಾತೆಯವರು ದಿನೇ ದಿನೇ ಕ್ಷೀಣಿಸುತ್ತ ಹೋದರು. ಅವರ ದೇಹವೂ ದುರ್ಬಲಗೊಂಡಿತು. ಬಾಯಿಯಲ್ಲಿ ಏನೂ ರುಚಿಯಿಲ್ಲ, ಏನನ್ನೂ ತಿನ್ನಲಾಗುತ್ತಿರಲಿಲ್ಲ. ಆಷಾಢ ಮಾಸದ ನಂತರ ಒಂದೇ ಸಮನೆ ಮಲಗಿಬಿಟ್ಟರು. ಅವರು ಅಷ್ಟೊಂದು ದುರ್ಬಲರಾಗಿದ್ದರು, ಆದರೂ ಒಂದು ದಿನ ನನ್ನನ್ನು ತಮ್ಮ ಬಳಿಗೆ ಕರೆದು ಹೇಳಿದರು: ''ಸುಧೀರಾ ಅದೇನು ಮೂರು ಸಣ್ಣ ಬಳೆಗಳನ್ನು ಹಾಕಿಕೊಟ್ಟಿದ್ದಾಳೆ! ಚೆನ್ನಾಗಿಲ್ಲ. ನನಗೆ ಗುಣವಾದ ಮೇಲೆ ನಿನ್ನ ಕೈಯಿಂದ ನಾಲ್ಕು ದಪ್ಪನೆಯ ಬಳೆಗಳನ್ನು ಹಾಕಿಸಿಕೊಳ್ಳುತ್ತೇನೆ.'' ನಾನಂದೆ, ''ಅದೆಲ್ಲ ಮಾಡೋಣ, ಅಮ್ಮಾ. ಮೊದಲು ನಿಮಗೆ ಬೇಗನೆ ಗುಣವಾಗಲಿ. ಹಾಗಿದ್ದರೆ ನಮಗೆಲ್ಲ ಆನಂದವಾಗುತ್ತದೆ.''

ಅವರು ಬಚ್ಚಲುಮನೆಗೆ ಹೋಗುತ್ತಿದ್ದರು. ಒಂದು ದಿನ ಹೇಳಿದರು, ಒಂದು ಸಣ್ಣ ಕೋಲನ್ನು ಕೊಟ್ಟರೆ ಚೆನ್ನಾಗಿತ್ತು. ಅದನ್ನು ಆಧರಿಸಿಕೊಂಡು ಚೆನ್ನಾಗಿ ನಡೆಯಬಹುದಿತ್ತು. ಮರುದಿನ ಅವರ ಕೋಣೆಯ ಮೂಲೆಯಲ್ಲಿ ಒಂದು ಸಣ್ಣ ಕೋಲನ್ನು ಯಾರೋ ಇಟ್ಟಿದ್ದರು. ಅದು ಅವರು ಬಯಸಿದ ಗಾತ್ರದಷ್ಟೇ ಇತ್ತು. ಅದನ್ನು ಹಿಡಿದುಕೊಂಡೇ ಶ್ರೀಮಾತೆ ಬಚ್ಚಲುಮನೆಗೆ ಹೋಗುತ್ತಿದ್ದರು.

ಜ್ವರ ಇನ್ನಷ್ಟು ತೀವ್ರಗೊಂಡಿತು. ದಿನದಲ್ಲಿ ಎರಡು-ಮೂರು ಬಾರಿ ಜ್ವರದಿಂದ ನಡುಕವುಂಟಾಗುತ್ತಿತ್ತು. ದೇಹ ಅತ್ಯಂತ ದುರ್ಬಲವಾಗಿತ್ತು. ಒಂದು ದಿನ ಅವರು ತಾವಾ

[೨] ಮಾಕುವಿನ ಮಗ. ಅವನನ್ನು ಶ್ರೀಮಾತೆ ತುಂಬಾ ಅಕ್ಕರೆಯಿಂದ ಕಾಣುತ್ತಿದ್ದರು.

ಗಿಯೇ ಹೇಳಿದರು: ''ಇನ್ನು ಮೇಲೆ ನನಗೆ ಈ ಕೋಣೆಯಲ್ಲೇ ಎಲ್ಲವನ್ನೂ ಮಾಡಬೇಕಾಗುವುದು. ಮೇಲಕ್ಕೆ ಏಳಲಾಗುತ್ತಿಲ್ಲ. ಠಾಕೂರರನ್ನು ಈ ಕೋಣೆಯಿಂದ ಬೇರೆ ಕಡೆ ತೆಗೆದುಕೊಂಡು ಹೋಗು. ಮಂಚ ಇತ್ಯಾದಿಗಳನ್ನು ಸರಿಸಿ, ನನಗೆ ನೆಲದಲ್ಲೇ ಹಾಸಿಗೆ ಹಾಸಿಕೊಡು.''

ಠಾಕೂರರನ್ನು (ಭಾವಚಿತ್ರ) ಮೂರನೇ ಮಹಡಿಗೆ ತೆಗೆದುಕೊಂಡು ಹೋಗಲಾಯಿತು. ಆಗ ಶ್ರೀಮಾತೆಯವರ ದೇಹದಲ್ಲಿ ತುಂಬಾ ಉರಿಯೆದ್ದಿತ್ತು. ಸುಧೀರಾ ಅಕ್ಕ ಮಾಡಿದ ವ್ಯವಸ್ಥೆಯಂತೆ, ನಿವೇದಿತಾ ಶಾಲೆಯ ಹುಡುಗಿಯರು ಪಾಳಿಯಲ್ಲಿ ಬಂದು ಶ್ರೀಮಾತೆಯವರಿಗೆ ಗಾಳಿ ಬೀಸುತ್ತಿದ್ದರು. ರಾಣಿ, ಗೀತಾ, ಕನಕ, ಶಿವಾ — ಇವರೆಲ್ಲ ಸರದಿ ಪ್ರಕಾರ ಬೆಳಗಿನಿಂದ ಸಂಜೆಯವರೆಗೆ; ರಾತ್ರಿಹೊತ್ತು ಪ್ರಫುಲ್ಲ ಅತ್ತೆ ಹಾಗೂ ಚಪಲಾ-ಅಕ್ಕ ಬರುತ್ತಿದ್ದರು. ರಾತ್ರಿಯಿಡೀ ಅವರು ಸರದಿ ಪ್ರಕಾರ ಗಾಳಿ ಬೀಸುತ್ತಿದ್ದರು. ಆ ಸಮಯದಲ್ಲೇ ಪ್ರಫುಲ್ಲ ಅತ್ತೆಗೆ ಕುಮಿಲ್ಲಾದಲ್ಲಿ ಕೆಲಸವಿದ್ದುದರಿಂದ ಅಲ್ಲಿಗೆ ಹೋಗಬೇಕಾಯಿತು.

ಆಗ ಶ್ರೀಮಾತೆಯವರು ರಾಧು, ಮಾಕು ಅಥವಾ ಅವರ ಮಕ್ಕಳನ್ನು ತಮ್ಮ ಬಳಿಗೆ ಬರಲು ಬಿಡುತ್ತಿರಲಿಲ್ಲ. ರಾಧುವನ್ನು ಕುರಿತು, ''ಅವಳನ್ನು ಊರಿಗೆ ಕಳುಹಿಸಿಬಿಡು'' ಎನ್ನುತ್ತಿದ್ದರು. ಒಂದು ದಿನ ನಾನೆಂದೆ, ''ಕಳುಹಿಸಿಬಿಡು, ಕಳುಹಿಸಿಬಿಡು ಎನ್ನುತ್ತೀರಿ. ರಾಧು ಇಲ್ಲದೆ ನೀವು ಬದುಕಿರಬಲ್ಲಿರಾ?'' ಅವರು ಬಹಳ ಜೋರಾಗಿ ಹೇಳತೊಡಗಿದರು: ''ಚೆನ್ನಾಗಿ ಬದುಕಿರಬಲ್ಲೆ. ಮಾಯೆಯಿಂದ ಕತ್ತರಿಸಿಕೊಂಡಿದ್ದೇನೆ.'' ಯಾವಾಗಲಾದರೂ ನಾನು ರಾಧು, ಮಾಕು ಇವರ ಮಕ್ಕಳ ಬಳಿಗೆ ಅವರನ್ನು ಕರೆದುಕೊಂಡು ಹೋದರೆ ಶ್ರೀಮಾತೆ ಹೇಳುತ್ತಿದ್ದರು: ''ಸರಳಾ, ಅವರನ್ನು ಇಲ್ಲಿಂದ ಬೇರೆಕಡೆ ಕರೆದುಕೊಂಡು ಹೋಗು. ಅವರನ್ನೇಕೆ ಕರೆದುಕೊಂಡು ಬಂದೆ?'' ಒಂದು ದಿನ ಅವರು ಶರತ್ ಮಹಾರಾಜರನ್ನು ಕರೆದು, ರಾಧು-ಮಾಕು ಇಬ್ಬರನ್ನೂ ಊರಿಗೆ ಕಳುಹಿಸಲು ಹೇಳಿದರು. ಅದಕ್ಕೆ ಮಹಾರಾಜ್, ''ಅಮ್ಮಾ, ನಿಮಗೆ ಕಾಯಿಲೆಯಾಗಿರುವಾಗ ಅವರನ್ನು ಊರಿಗೆ ಕಳುಹಿಸಿಬಿಟ್ಟರೆ ಅವರಿಗೆ ತುಂಬಾ ದುಃಖವುಂಟಾದೀತು. ಇನ್ನೂ ಸ್ವಲ್ಪ ದಿನ ನೋಡುತ್ತೇನೆ'' ಎಂದರು. ಅದಕ್ಕೆ ಶ್ರೀಮಾತೆ, ''ಕಳುಹಿಸಿಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು; ಇನ್ನೇನೂ ಇಲ್ಲ'' ಎಂದರು. ಅವರಿಬ್ಬರೂ ಕೊನೆಯವರೆಗೂ 'ಉದ್ಬೋಧನ'ದಲ್ಲೇ ಇದ್ದರು; ಆದರೆ ಶ್ರೀಮಾತೆಯವರ ಕೋಣೆಗೆ ಮಾತ್ರ ಹೋಗುತ್ತಿರಲಿಲ್ಲ.

ಆಗ ಶ್ರೀಮಾತೆಯವರಿಗೆ ವೈದ್ಯರಿಂದ ಚಿಕಿತ್ಸೆ ನಡೆಯುತ್ತಿತ್ತು. ಅವರ ಅಡುಗೆ ಎಲ್ಲವನ್ನೂ ಸೌದೆ ಒಲೆ ಉರಿಸಿ ತಯಾರಿಸುತ್ತಿದ್ದರು. ಶ್ರೀಮಾತೆಯವರ ಬಾಯಲ್ಲಿ ಏನೂ ರುಚಿಯಿರುತ್ತಿರಲಿಲ್ಲ. ಪ್ರತಿದಿನವೂ ತುಸು ಪೊಸ್ತೊ (ಒಂದು ಬಗೆಯ ಪಲ್ಯ) ತಿನ್ನುತ್ತಿದ್ದರು. ಅಮರುಲ್ ಸೊಪ್ಪನ್ನೂ ಅವರು ಇಷ್ಟಪಡುತ್ತಿದ್ದರು. ಬೇಲೂರು ಮಠದಿಂದ ಪ್ರತಿದಿನವೂ ಅವರಿಗಾಗಿ ಅದನ್ನು ತರುತ್ತಿದ್ದರು. ಶ್ರೀಮಾತೆ ಸಾಮಾನ್ಯವಾಗಿ ತುಂಬಾ ಕಡಿಮೆ ಅನ್ನ ಉಣ್ಣುತ್ತಿದ್ದರು. ಅವರಿಗೆ ಬಾಯಲ್ಲಿ ರುಚಿ ಇಲ್ಲದ್ದರಿಂದ, ಏನು ರುಚಿಸುವುದೋ ಅದನ್ನು ತಿನ್ನಲು ಹೇಳಿದ್ದರು. ಹೆಚ್ಚು ಹಾಲು ಕುಡಿದಷ್ಟೂ ಒಳ್ಳೆಯದೇ. ಎಷ್ಟು ಹಾಲಿದೆಯೋ, ಅಷ್ಟೇ ನೀರನ್ನು ಬೆರೆಸಬೇಕು. ಬಳಿಕ ಸೌದೆಯ ಬೆಂಕಿಗೆ ಆ ನೀರೆಲ್ಲ ಇಂಗಿಹೋಗಬೇಕು. ಉಳಿದ ಹಾಲನ್ನು ಶ್ರೀಮಾತೆಯವರಿಗೆ ಕುಡಿಸಬೇಕಿತ್ತು. ಕೈ-ಕಾಲುಗಳು ಊದಿಕೊಂಡಿದ್ದರಿಂದ, ಅವರ ಅಡುಗೆಯಲ್ಲಿ ಉಪ್ಪು ಸೇರಿಸಬಾರದು ಎಂದು ನಿಷೇಧಿಸಿದ್ದರು. ಸ್ವಲ್ಪ ಸೈಂಧವ ಲವಣವನ್ನು ಉಪ್ಪಿನ ಮೇಲೆ ಇಟ್ಟು, ಅದನ್ನು ಊಟ ಮಾಡುವಾಗ ಸ್ವಲ್ಪ ಮಿಶ್ರಣ ಮಾಡಿಕೊಡುತ್ತಿದ್ದರು. ಹಾಸಿಗೆಯ ಮೇಲೆ ತಲೆದಿಂಬನ್ನು ನೇರವಾಗಿಟ್ಟು, ಅದಕ್ಕೆ ಶ್ರೀಮಾತೆಯವರನ್ನು ಒರಗಿ ಕುಳಿತುಕೊಳ್ಳಿಸಿ, ಅವರ ಮಡಿಲಲ್ಲಿ ಟವೆಲನ್ನು ಇಡಲಾಗುತ್ತಿತ್ತು. ನೆಲದಲ್ಲಿ ನಾನು ತಟ್ಟೆಯನ್ನಿಟ್ಟು, ಸ್ವಲ್ಪ ಸ್ವಲ್ಪವೇ ತಿನ್ನಿಸುತ್ತಿದ್ದೆ. ಒಂದೊಂದು ಸಲ ಶ್ರೀಮಾತೆಯವರು ಒಂದು ಸಣ್ಣ ಬಟ್ಟಲಿನಿಂದ ತಾವೇ ಕೈಯಿಂದ ತೆಗೆದುಕೊಂಡು ತಿನ್ನುತ್ತಿದ್ದರು. ದೇಹ ದುರ್ಬಲವಾದದ್ದರಿಂದ ಹಾಗೆ ಹೆಚ್ಚು ಹೊತ್ತು ಹಿಡಿದುಕೊಳ್ಳಲಾಗುತ್ತಿರಲಿಲ್ಲ.

*(ಮುಂದುವರಿಯುವುದು)*

## ನಿಮ್ಮ ಜೀವನವನ್ನು ಪ್ರೀತಿಸಿ

ನಿಮ್ಮ ಜೀವನವು ಕ್ಷುದ್ರವೇ ಆಗಿರಲಿ. ಅದನ್ನು ಎದುರಿಸಿ : ಅದನ್ನು ಬಾಳಿ : ಅದನ್ನು ದೂರಮಾಡಿ ಬಯ್ಯಬೇಡಿ. ಅದು ನಿಮ್ಮಷ್ಟು ಕೆಟ್ಟುದಲ್ಲ. ನೀವು ಬಹಳ ಐಶ್ವರ್ಯವಂತರಾಗಿದ್ದಾಗ ಅದು ಅತಿ ದರಿದ್ರವಾಗಿ ಕಾಣಿಸುವುದು. ತಪ್ಪು ಹುಡುಕುವವನು ಸ್ವರ್ಗದಲ್ಲಿಯೂ ತಪ್ಪುಗಳನ್ನೇ ಕಾಣುವನು. ದರಿದ್ರವೇ ಆಗಿದ್ದರೂ, ನಿಮ್ಮ ಜೀವನವನ್ನು ಪ್ರೀತಿಸಿ. ದರಿದ್ರ ಮಂದಿರದಲ್ಲಿಯೂ ನೀವು ಬಹುಶಃ, ಸಂತೋಷಪ್ರದವಾದ, ಪುಳಕಗೊಳ್ಳುವಂತಹ, ದಿವ್ಯಮುಹೂರ್ತಗಳನ್ನು ಪಡೆಯಬಹುದು. ಸಂಧ್ಯಾಸೂರ್ಯನು ಶ್ರೀಮಂತನ ಅರಮನೆಯಿಂದ ಪ್ರತಿಫಲಿಸುವಷ್ಟೇ ಪ್ರಕಾಶಮಾನನಾಗಿ ಭಿಕ್ಷುಕ ಮಂದಿರದ ಕಿಟಕಿಗಳಿಂದಲೂ ಪ್ರತಿಫಲಿಸುತ್ತಾನೆ. ಆ ಮಂದಿರದಲ್ಲಿರುವ ಹಿಮವೂ ವಸಂತದಲ್ಲಿ ಅಷ್ಟೇ ಮುಂಚಿತವಾಗಿ ಕರಗುತ್ತದೆ. ಶಾಂತಚಿತ್ತನಾದವನು ಅರಮನೆಯಲ್ಲಿ ಇರುವಂತೆಯೇ ಅಲ್ಲಿಯೂ ಅಷ್ಟೇ ತೃಪ್ತಿಯಾಗಿದ್ದು ಅಲ್ಲಿ ಬರುವಷ್ಟೇ ಸಂತೋಷ ಭಾವನೆಗಳನ್ನು ಅಲ್ಲಿಯೂ ಏಕೆ ಪಡೆಯಬಾರದೋ, ನಾನು ಕಾಣೆ.

— ಡೇವಿಡ್ ಹೆನ್ರಿ ಥೋರೋ (*'ವಾಲ್ಡನ್'ನಲ್ಲಿ*)